Electrification of Villages in Nanjangud Constituency

1124. SRI K.B. SHIVAIAH (Nanjangud) —Will the Minister of State for Power be pleased to state.

(a) the number of villages in Nanjangud Constituency (in Nanjangud Taluk) i.e. Kasaba and Hullahalli Hoblies;

(b) the number of villages which are not electrified;

(c) time required to electrify 100% in Nanjangud Constituency

SRI G.H. ASWATHA REDDY (Minister of State for Power).—

(a) As per 1971 census, there are 102 villages of which 13 are Becharak villages.

(b) As on 30-4-1982, 35 (inhabited) villages are not yet electrified.

(c) 100% Electrification in Nanjangud Constituency can be achieved in about the next five years, if the required funds are available.

ಶ್ರೀ ಕೆ.ಬಿ. ಶಿವಯ್ಯ —ಮಾನ್ಯ ಅಧ್ಯಕ್ಷರೇ ನನ್ನ (ಅ) ಪ್ರಶ್ನೆಗೆ ಉತ್ತರವಾಗಿ ಮಾನ್ಯ ಮಂತ್ರಿಗಳು ಈ ರೀತಿ ಹೇಳಿದ್ದಾರೆ, ಅದು ಏನೆಂದರೆ ೩೦-೪-೧೯೮೨ರಂದು ಇದ್ದ ರೀತ್ಯಾ ೩೫ ವಾಸವಾದ ಗ್ರಾಮಗಳನ್ನಿನ್ನೂ ವಿದ್ಯುದ್ದೀಕರಣಗೊಳಿಸಿಲ್ಲ ಎಂದು ಹೇಳಿದ್ದಾರೆ. ಈಗಾಗಲೇ ಸರ್ಕಾರದವರು ಅನೇಕ ಗ್ರಾಮಗಳಿಗೆ ವಿದ್ಯುಚ್ಛಕ್ತಿಯನ್ನು ಕೊಡಬೇಕೆಂದು ಮಂಜೂರು ಮಾಡಿದ್ದರೂ ಸಹ ಇದುವರೆವಿಗೂ ಕ್ರಮ ಕೈಗೊಂಡಿಲ್ಲ. ಆದ್ದರಿಂದ ಸರ್ಕಾರದವರು ಇದರ ಬಗ್ಗೆ ಏನಾದರೂ ಕ್ರಮ ಕೈಗೊಳ್ಳುತ್ತೀರಾ.

ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ.—ಮಾನ್ಯ ಅಧ್ಯಕ್ಷರೇ ಈ ೩೫ ಗ್ರಾಮಗಳಲ್ಲಿ ಮಾನ್ಯ ಸದಸ್ಯರ ಕ್ಷೇತ್ರವಾದಂತಹ ನಂಜನಗೂಡು ಸೇರಿಲ್ಲ. ಸರ್ಕಾರ ಈ ವರ್ಷ ಹೊಸದಾಗಿ ೧೦ ಗ್ರಾಮಗಳನ್ನು ಸೇರಿಸಿದ್ದಾರೆ. ಹಿಂದೆ ಇದ್ದ ೨೫ ಗ್ರಾಮಗಳನ್ನು ಮತ್ತೆ ಈ ೧೦ ಗ್ರಾಮಗಳನ್ನು, ಒಟ್ಟು ೩೫ ಗ್ರಾಮಗಳನ್ನು ವಿದ್ಯುದ್ದೀಕರಣಗೊಳಿಸುವುದಕ್ಕೆ ಇನ್ನು ಸುಮಾರು ೫ ವರ್ಷಗಳು ಬೇಕಾಗುತ್ತದೆ.

ಶ್ರೀ ಕೆ.ಬಿ. ಶಿವಯ್ಯ.—ಅಧ್ಯಕ್ಷರೇ, ಇನ್ನೂ ಅನೇಕ ಕಾಡು ಕುರುಬರ ಕಾಲೋನಿಗಳು ಇವೆ, ಕೊತ್ತನಹಳ್ಳಿ ಕಾಲೋನಿ, ನಾಗನಾಪುರ ಕಾಲೋನಿ, ವೆಂಕಟಾಚಲಪುರ ಕಾಲೋನಿ, ಮತ್ತು ಅಂಜನಾಪುರ ಕಾಲೋನಿ ಇವುಗಳ ಜೊತೆಗೆ ರಿಡಿಜನರ ಕಾಲೋನಿಗಳು ಕೂಡ ಇವೆ. ಮತ್ತು ಇನ್ನೂ ಹಿಂದುಳಿದ ಪ್ರದೇಶಗಳು ಅನೇಕ ಇವೆ ಈ ಎಲ್ಲಾ ಗ್ರಾಮಗಳನ್ನೂ ಕೂಡ ಈ ರೀತಿಯ ಕಾರ್ಯಕ್ರಮದಲ್ಲಿ ಸೇರಿಸಿಕೊಂಡು ಅತೀ ತ್ವರಿತವಾಗಿ ಇನ್ನು ಒಂದೆರಡು ವರ್ಷಗಳಲ್ಲೇ ಎಲ್ಲಾ ವಿದ್ಯುದ್ದೀಕರಣಗಳನ್ನು ಈ ಪ್ರದೇಶಗಳಲ್ಲಿ ಮಾಡಿಕೊಡಲು ಸರ್ಕಾರ ಆಲೋಚನೆ ಮಾಡುತ್ತದೆಯೇ ಸ್ವಾಮಿ

ಶ್ರೀ ಜಿ.ಎಚ್. ಅಶ್ವತ್ಥರೆಡ್ಡಿ.—ಟ್ರೈಬಲ್ ಏರಿಯಾಗೋಸ್ಕರ ಮೈಸೂರಿಗೆ ನಾಲ್ಕು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಈ ಎಲ್ಲಾ ಕಾರ್ಯಕ್ರಮಗಳನ್ನು ಈ ವರ್ಷ ಮಾಡಿಸಬೇಕೆಂದು ಪ್ರಯತ್ನ ಮಾಡುತ್ತಿದ್ದೇವೆ. ಮತ್ತು ಹರಿಜನ ಗಿರಿಜನ ಕಾಲೋನಿಗಳಿಗೆ ಸಂಬಂಧಿಸಿದ ಹಾಗೆ ಹ್ಯಾಂಪರ್‌ಗಳನ್ನು ಸೇರಿಸಿಕೊಂಡು ಎಲ್ಲಾ ಕಾರ್ಯಗಳನ್ನು ಮಾಡಲು ಸರ್ಕಾರದಿಂದ ಆದೇಶ ಕೊಟ್ಟಿದ್ದೇವೆ.

ಶ್ರೀ ಎಲ್.ಟಿ. ತಿಮ್ಮಪ್ಪ ಹೆಗಡೆ. ಇದರಲ್ಲಿ ವಿದ್ಯುಚ್ಛಕ್ತಿ ನಿಗಮದಿಂದ ಹಣ ವಾಂಜೂರಾಗಿರುತಕ್ಕಂಥ ಯೋಜನೆಗಳಲ್ಲಿ ತೀವ್ರಗತಿಯಿಂದ ಕೆಲಸ ನಡೆಯುತ್ತಿಲ್ಲ. ಕೇಳಿದರೆ ಕಂಬ ಮತ್ತು ತಂತಿಗಳು ಕಡಿಮೆ ಇವೆಯೆಂದು ಹೇಳುತ್ತಾರೆ. ಈ ಸಾಮಾನುಗಳ ಕೊರತೆ ಇದೆಯೆಂದು ಹೇಳಿದರೆ ಅದರ

ನಿವಾರಣೆಗೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಸಿಬ್ಬಂದಿ ಕೊರತೆ ಕೂಡ ಇದೆಯೆಂದು ತಿಳಿದು ಬಂದಿದೆ. ಇದರ ಬಗ್ಗೆ ಏನು ಹೇಳುತ್ತೀರಿ?

ಶ್ರೀ ಜಿ.ಎಚ್. ಅಶ್ವತ್ಥರೆಡ್ಡಿ.—ಸಲಕರಣೆಗಳ ಕೊರತೆ ಇದ್ದುದನ್ನು ಈಗ ನಿವಾರಿಸಿದ್ದೇವೆ, ಕಂಬ ಮತ್ತು ತಂತಿ ವಿಷಯದಲ್ಲಿ ಹೊಸದಾಗಿ ಆರ್ಡರ್ ನೀಡಲಾಗಿದೆ. ಆಗ್.ಇ.ಸಿ ಯೋಜನೆಯಲ್ಲಿ ಅವುಗಳನ್ನು ಪೂರೈಸುವ ಪ್ರಯತ್ನ ಮಾಡಲಾಗುವುದು. ಇನ್ನು ಸಿಬ್ಬಂದಿ ವರ್ಗ ಕಡಿಮೆ ಇದ್ದರೆ ಅದನ್ನು ಪರಿಶೀಲನೆ ಮಾಡುತ್ತೇನೆ. ಹೆಚ್ಚು ಸಿಬ್ಬಂದಿ ವರ್ಗವನ್ನು ತೆಗೆದುಕೊಳ್ಳಬೇಕೆಂದು ಸರ್ಕಾರಕ್ಕೆ ಇಚ್ಛೆ ಇದೆ.

ಶ್ರೀ ಕೆ.ಬಿ. ಶಿವಯ್ಯ.—ನಮ್ಮಲ್ಲಿ ನುಗ್ಗು ಅಚ್ಚುಕಟ್ಟು ಪ್ರದೇಶದಲ್ಲಿ ಹಾಗೂ ಕಬಿನಿ ಕಾಲುವೆ ತೋಡುವ ಪ್ರದೇಶದಲ್ಲಿ ಕೆಲವು ಲೈನುಗಳನ್ನು ಹಾಕಿದ್ದು ಈಗ ಅವುಗಳ ಅವಶ್ಯಕತೆ ಇಲ್ಲದೆ ಅವುಗಳು ಐಡಲ್ ಲೈನುಗಳಾಗಿವೆ. ಇವುಗಳನ್ನು ಅಲ್ಲಿಂದ ತೆಗೆಯುವುದರಿಂದ ಹೆಚ್ಚಿನ ಪ್ರಮಾಣದಲ್ಲಿ ಕಂಬ ಮತ್ತು ತಂತಿ ಮೊದಲಾದ ಉಪಕರಣಗಳು ದೊರೆಯುತ್ತವೆ. ಈ ಎಲ್ಲಾ ಉಪಕರಣಗಳನ್ನು ತೆಗೆದುಕೊಂಡು ಮೇಲೆ ಹೇಳಿದ ಪ್ರದೇಶದಲ್ಲಿ ವಿದ್ಯುದ್ದೀಕರಣ ಮಾಡಲು ಸರ್ಕಾರ ಕ್ರಮ ತೆಗೆದುಕೊಳ್ಳುತ್ತೀರಾ ಸ್ವಾಮಿ?

ಶ್ರೀ ಜಿ.ಎಚ್. ಅಶ್ವತ್ಥರೆಡ್ಡಿ.—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಒಳ್ಳೆಯ ಸಲಹೆ ಕೊಟ್ಟಿದ್ದಾರೆ. ಕಬಿನಿ ಕಾಲುವೆ ಪ್ರದೇಶದಲ್ಲಿ ಈಗ ಪಂಪು ಸೆಟ್ಟುಗಳಿವೆ, ವಿದ್ಯುಚ್ಛಕ್ತಿ ಬೇಕಾಗಿಲ್ಲ. ಈ ಉಪಕರಣಗಳನ್ನು ತಂತಿ, ಕಂಬ ಮೊದಲಾದವುಗಳನ್ನು ನಂಜನಗೂಡು ಪ್ರದೇಶದಲ್ಲಿ ಬರತಕ್ಕಂಥ ಹಳ್ಳಿಗಳಿಗೆ ವಿದ್ಯುದ್ದೀಕರಣ ಮಾಡಲು ಬಳಸಿಕೊಳ್ಳುವುದು ಒಳ್ಳೆಯ ಸಲಹೆ. ಇವುಗಳನ್ನು ಏಳು ವರ್ಷಗಳವರೆಗೆ ತೆಗೆಯಬಾರದೆಂದು ನಿಯಮ ಇದ್ದರೂ ಕೂಡ, ಪ್ರಯೋಜನ ಇಲ್ಲವೆಂದಮೇಲೆ ಅವುಗಳನ್ನು ನಂಜನಗೂಡು ಮತ್ತು ಹಳ್ಳಿಗಳಿಗೆ ಉಪಯೋಗಿಸಿಕೊಳ್ಳುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

Mineral resources in Sindgi Taluk

1115. SRI M. H. BEKINALKAR(Sindgi).—Will the Chief Minister be pleased to state.

(a) whether they are aware that there is an element of cement in the stones available at Honnali, Taluk: Sindagi, District: Bijapur;

(b) whether any body has come forward to exploit the potential;

(c) whether the Government give encouragement to any private terpreneurs?

SRI R. GUNDU RAO (Chief Minister).—

(a) (b) & (c) The limestone deposits of Honnali Village in Sindgi Taluk, Bijapur District have not been investigated indetail yet. Since the Honnali area comes within the Bhima series of limestone extending from Talikot in Bijapur District; there is distinct likelihood of limestone deposits in the area. No enterpreneur has so far come forward to exploit the limestone deposit in the area. If any entrepreneur comes forward to exploit the mineral and set up an industry, all possible assistance will be extended by the State Government.